## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **843** |
| **ಸದಸ್ಯರ ಹೆಸರು** | **ಶ್ರೀ ಟಿ. ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **26.12.2022** |
| **ಉತ್ತರಿಸಬೇಕಾದ ಸಚಿವರು** | **ಮಾನ್ಯ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಉನ್ನತ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರು** |

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಅ) ಜಾಗತಿಕ ಮಟ್ಟದಲ್ಲಿ ಆರ್ಥಿಕ ಹಿಂಜರಿತ ಆರಂಭವಾಗಿದ್ದು ರಾಜ್ಯದ ಐಟಿ-ಬಿಟಿ ಕಂಪನಿಗಳ ಮೇಲೆ ಪ್ರಭಾವ ಬೀರಿರುವುದು ನಿಜವೇ; ಸದರಿ ಪರಿಣಾಮಗಳ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡುವುದು)</td><td rowspan="3">ಐಟಿ, ಸಾಫ್ಟ್‌ವೇರ್ ಹಾಗೂ ತಂತ್ರಜ್ಞಾನ ಕೈಗಾರಿಕೆಗಳಿಗೆ ರಾಷ್ಟ್ರ ಮಟ್ಟದ ಕೈಗಾರಿಕಾ ಸಂಘವಾದ NASSCOM ಸಂಸ್ಥೆಯು, ತಂತ್ರಜ್ಞಾನ ಸೇವೆಗಳ ಭವಿಷ್ಯ ಕುರಿತ ತನ್ನ ವರದಿಯಲ್ಲಿ , ಭಾರತದ ತಂತ್ರಜ್ಞಾನ ಸೇವೆಗಳ ಉದ್ಯಮವು ಶೇ. 10-12 ರಷ್ಟು ಸಂಚಿತ ವಾರ್ಷಿಕ ಬೆಳವಣಿಗೆ ದರ [CAGR] ತಲುಪಲಿದ್ದು, ಮುಂದಿನ ಸುಮಾರು 5 ವರ್ಷಗಳಲ್ಲಿ 300 ರಿಂದ 350 ಬಿಲಿಯನ್ ಅಮೇರಿಕನ್ ಡಾಲರ್ ವಾರ್ಷಿಕ ಆದಾಯ ತಲುಪುವ ನಿರೀಕ್ಷೆಯಿದೆ ಎಂದು ತಿಳಿಸಿದೆ. ಕ್ಲೌಡ್ ಸೇವೆಗಳು, Artificial Intelligence, ಸೈಬರ್ ಸುಭದ್ರತೆ, Internet of Things ಮುಂತಾದ ತಂತ್ರಜ್ಞಾನಗಳಿಂದಾಗಿ, ಡಿಜಿಟಲ್ ರೂಪದ ವೆಚ್ಚಗಾರಿಕೆಯು ತ್ವರಿತವಾಗಿ ವೇಗ ಪಡೆದುಕೊಳ್ಳುವ ಮುನ್ಸೂಚನೆಯಿದೆ. 2025ನೇ ಇಸವಿಯಷ್ಟರಲ್ಲಿ, ಭಾರತದ ತಂತ್ರಜ್ಞಾನ ಸೇವೆಗಳ ಆದಾಯದಲ್ಲಿ ಡಿಜಿಟಲ್ ಸೇವೆಗಳ ಪಾಲು ದ್ವಿಗುಣಗೊಂಡು ಸುಮಾರು ಶೇ. 55 ರಿಂದ 60 ರಷ್ಟಕ್ಕೆ ಏರುವ ಸಂಭವವಿದೆ.<br><br>ಭಾರತದ ಐಟಿ ಸಂಸ್ಥೆಗಳು ಸರ್ಕಾರದ, ತಯಾರಿಕೆಯ, ಬ್ಯಾಂಕಿಂಗ್ ಮತ್ತು ಆರೋಗ್ಯ ರಕ್ಷೆ, ಮತ್ತಿತರ ವಲಯಗಳ ವ್ಯವಹಾರಗಳಿಗೆ ಕಲ್ಪಿಸುತ್ತಿರುವ ಐಟಿ ಸೇವೆಗಳು ಸದೃಢವಾಗಿ ಮುಂದುವರಿಯಲಿವೆ. ಕರ್ನಾಟಕ ರಾಜ್ಯವು ದೇಶದ ಐಟಿ ರಾಜಧಾನಿಯಾಗಿ ಮತ್ತು ತಂತ್ರಜ್ಞಾನದ ಹಬ್ ಆಗಿರುವುದು ಮುಂದುವರಿಯಲಿದೆ. ಜಾಗತಿಕ ಮಟ್ಟದ ಆರ್ಥಿಕ ಹಿಂಜರಿತವು ದೇಶದ ತಂತ್ರಜ್ಞಾನ ಉದ್ಯಮದ ಮೇಲೆ ಅಷ್ಟೇನು ಹೆಚ್ಚಾಗಿ ಪರಿಣಾಮ ಬೀರುವ ಸಂಭವವಿಲ್ಲ.<br><br>ಸರ್ಕಾರವು ತಂತ್ರಜ್ಞಾನ ಉದ್ಯಮದ ನಾಯಕರುಗಳೊಂದಿಗೆ ಆಗಿಂದಾಗ್ಗೆ ಮಾತುಕತೆ ನಡೆಸುತ್ತಾ ಬಂದಿದೆ. ರಾಜ್ಯದ ಮತ್ತು ಬೆಂಗಳೂರಿನ ಹಿರಿಮೆಯಾಗಿರುವ ಐಟಿಬಿಟಿ ಕ್ಷೇತ್ರದ ನಾಯಕತ್ವದ ಸ್ಥಾನವನ್ನು ಜತನ ಮಾಡಿಕೊಳ್ಳಲು ಸರ್ಕಾರವು ಕೈಗೊಳ್ಳಬೇಕಾಗುವ ಉಪಕ್ರಮಗಳ ಬಗ್ಗೆ ಉದ್ಯಮದವರ ದೃಷ್ಟಿಕೋನಗಳನ್ನು ಪಡೆದುಕೊಳ್ಳುತ್ತಾ ಸಾಗಿದೆ. ನವೆಂಬರ್ 2022ರಲ್ಲಿ ನಡೆಸಿದ ಬೆಂಗಳೂರು ಟೆಕ್ ಸಮ್ಮಿಟ್ ಮೇಳವು ಅಂತಹ ಬೃಹತ್ ವೇದಿಕೆಗಳಲ್ಲಿ ಒಂದಾಗಿದ್ದು, ಮೇಳದಲ್ಲಿ ಸರ್ಕಾರ ಮತ್ತು ತಂತ್ರಜ್ಞಾನ ಉದ್ಯಮದ ನಡುವೆ ಸಂವಾದಕ್ಕಾಗಿ ವಿಪುಲವಾಗಿ ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ.</td></tr>
<tr><td>ಆ) ಆರ್ಥಿಕ ಹಿಂಜರಿತ ಮುಂದುವರೆದರೆ, ಮುಂಬರುವ ದಿನಗಳಲ್ಲಿ ಆರ್ಥಿಕ ಬಿಕ್ಕಟ್ಟಿನ ಸ್ವರೂಪ ಪಡೆಯಲ್ಲಿದ್ದು; ವ್ಯವಸ್ಥೆ ಕುಸಿಯುವ ಮುನ್ನವೇ ಐಟಿ-ಬಿಟಿ ಕಂಪನಿಗಳಿಗೆ ನೆರವಿನ ಪ್ಯಾಕೇಜ್ ನೀಡುವ ಬಗ್ಗೆ ಸರ್ಕಾರದ ನಿಲುವೇನು;</td></tr>
<tr><td>ಇ) ಐಟಿಬಿಟಿ ಮಹಾನಗರಿ ಎಂದೇ ಹೆಸರಾಗಿರುವ ಬೆಂಗಳೂರಿನ ಹಿರಿಮೆ ಉಳಿಸುವ ನಿಟ್ಟಿನಲ್ಲಿ ಈ ಸಂಸ್ಥೆಗಳ ಉದ್ದಿಮೆಗಳ ಜೊತೆ ಮಾತುಕತೆ ನಡೆಸಲು ಸರ್ಕಾರ ಉದ್ದೇಶಿಸಿದೆಯೇ? (ಮಾಹಿತಿ ನೀಡುವುದು).</td></tr>
</table>

(ಐಟಿಬಿಟಿ 120 ಎಲ್‌ಸಿಎಂ 2022)

**(ಡಾ|| ಅಶ್ವಥ್ ನಾರಾಯಣ ಸಿ. ಎನ್.)**
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಉನ್ನತ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರು.